# ಟೆಡ್ಡಿ ಬೇರ್

■ ಶೀಲಾ ಶಿವಾನಂದ ಗೌಡರ
ಕಲೆ: ಸಂತೋಷ್ ಸಸಿಹಿತ್ಲು

'ಅಪ್ಪಾ! ಈ ಸಲಾನೂ ನೀವು ಪಾಲಕರ ಸಭೆಗೆ ಬರಲಿಲ್ಲ. ಸಾಲಿಯೊಳಗ ಟೀಚರು ಬಾಳ ಬೈಯಾಕತ್ತಾರ. ಹಿಂಗs ಆದ್ರ ಇಂಟರನಲ್ ಮಾರ್ಕ್ಸ ಕಟ್ ಮಾಡ್ತೇನಿ ಅನ್ನಾಕತ್ತಾರ. ಅಣ್ಣನ ಕಂಪ್ಲೇಂಟು ಬಾಳ ಹೇಳಾಕತ್ತಾರ. ಅವನ ಸಲವಾಗಿ ಬರೇ ನಾನ ಬೈಸಕೊಳಾಕತ್ತೇನಿ. ನನ್ನ ಗೆಳತೇರ ಮುಂದ ನನಗ ಬಾಳ ಸುಮಾರಾಗಾಕತ್ತೇತಿ. ಹಿಂಗs ಆದರ ನಾ ಸಾಲಿ ಬಿಟ್ ಬಿಡತೇನಿ ನೋಡು' ಎಂದು ಆಫೀಸಿನಿಂದ ಉಸ್ಸೆಂದು ಮನೆ ಸೇರಿದ ಸಂದೀಪನಿಗೆ ಮಗಳು ಬಿಂದು ಕ್ಲಾಸ್ ತೆಗೆದುಕೊಳ್ಳಲು ಪ್ರಾರಂಭಿಸಿದಳು. ಆಫೀಸಿನಲ್ಲಿ ಬಾಸಿನ ಬಿಗಿ ಹಿಡಿತವನ್ನು ಸಡಲಿಸಿ, ಟ್ರಾಫಿಕ್‌ನಲ್ಲಿ ಅಲ್ಲಿ ಇಲ್ಲಿ ನುಸುಳಿ ಗಂಟೆಗಳವರೆಗೆ ಕಾದು ತಲೆ ಬಿಸಿ ಮಾಡಿಕೊಂಡು ಬಂದಿದ್ದ ಸಂದೀಪ ಮಗಳ ಕಾರಣಕ್ಕೆ ಹೆಂಡತಿಯ ಮೇಲೆ ಸಿಡಿಮಿಡಿಯಾದ.

'ಪಾಲಕರ ಸಭೆಗೂ ನಾನ ಹೋಗಬೇಕಂದ್ರ ಹೆಂಗs? ಇವತ್ತ ನಿನ್ನ ಸಾಲಿ ಹಾಫ್ ಡೆ ಇತ್ತಿಲ್ಲ? ಮಧ್ಯಾನ್ಹ ಬಂದೇನ್ ಮಾಡದಿ? ಹೋಗಿ ಬರಬೇಕಿಲ್ಲ?' ಎಂದು ರೇಗಿದ.

'ಓ! ಇಲ್ಲೆ ಅತ್ತಿಯವರ್ನ ದವಾಖಾನಿಗೆ ನೀವು ಕರಕೊಂಡ ಹೋಗತಿದ್ರೇನ? ಅವರ ಬಿಪಿ, ಶುಗರ್ ಗುಳಿಗಿ ಖಾಲಿ ಆಗ್ಯಾವು. ನೀವು ನನ್ನ ದವಾಖಾನಿಗೇ ಕರಕೊಂಡು ಹೋಗವಲ್ರಿ. ಬರೇ ನಿಮ್ದು –ನಿಮ್ಮ ಮಕ್ಕಳದು ಅಷ್ಟ ಯೋಚನೆ ಮಾಡತಿರಿ. ಮುದುಕಿ ನಾನು ಒಬ್ಬಕಿ ಮನ್ಯಾಗದೇನಿ ಅನ್ನೋದು ಮರತ ಬಿಟ್ಟೇರಿ ಅಂತ ನಾಕ ದಿನದಿಂದ ಗೋಳಾಡತಿದ್ರು. ಅದಕ್ಕ ಇವತ್ತ ರಜಾ ಹಾಕಿ ದವಾಖಾನಿಗೆ ಕರಕೊಂಡ ಹೋಗಿದ್ದೆ. ಪಾಳೆ ಬಾಳ ಇದ್ದಿದ್ದಕ ಪೂರ್ತಿ ದಿನಾ ಅಲ್ಲೇ ಹೋತು. ಈ ತರುಣನ ಸಾಲಿ ಮಧ್ಯಾನ್ಹನ ಮುಗದೈತಿ. ಅವ ಇನ್ನೂ ಆದರೂ ಮನಿಗೆ ಬಂದಿಲ್ಲ! ಅವನ ಗೆಳೆಯರಿಗೆ ಫೋನರ ಮಾಡರಿ' ಎಂದು ಹೆಂಡತಿ ಮಧು ಸಮಜಾಯಿಷಿ ಕೊಡುತ್ತ ಮತ್ತೊಂದು ಕೆಲಸವನ್ನು ಸಂದೀಪನ ಹೆಗಲಿಗೇ ಹೊರಿಸಿ ಹೊತ್ತಿದ ವಾಸನೆ ಬಂತು ಎಂದು ಅಡುಗೆ ಮನೆಗೆ ಓಡಿದಳು. ಬಿಂದು ತಂದೆಗೆ ದೂರನ್ನು ಕೊಟ್ಟು, ಕನ್ನಡಿಯ ಮುಂದೆ ತನ್ನ ಮುಂಗುರುಳುಗಳೊಂದಿಗೆ ಆಟವಾಡುತ್ತ ವೈಯಾರ ಮಾಡುವುದರಲ್ಲಿ ವ್ಯಸ್ಥಳಾಗಿದ್ದಳು. ಸಂದೀಪ ಮತ್ತೆ ಫೋನು ಕೈಗೆತ್ತಕೊಂಡು ಕನ್ನಡಕದ ಮೂಲಕ ನಂಬರ ಹುಡುಕತೊಡಗಿದ. ಅದೇ ತಾನೆ ನಿದ್ರಾಲಿಂಗನದಲ್ಲಿ ವಿರಮಿಸಿದ್ದ ಮೊಬೈಲಿಗೂ ನಿದ್ರಾಭಂಗವಾಗಿ ಹಟ ಮಾಡತೊಡಗಿತ್ತು. ಎಲ್ಲ ಗೋಜಲುಗಳ ಮಧ್ಯೆ ಉತ್ತುಂಗಕ್ಕೇರುತ್ತಿದ್ದ ಆತನ ಬಿಪಿಯನ್ನು ನೋಡಿ ಸೋಫಾದಲ್ಲಿ ಪಕ್ಕದಲ್ಲೇ ಬಸವಳಿದು ಬಿದ್ದಿದ್ದ ಲ್ಯಾಪಟಾಪೊಂದೇ 'ಅಯ್ಯೋ' ಎಂದು ಮರಗುತ್ತಿತ್ತು. ಸಂದೀಪ ಮಗನಿಗಾಗಿ ಮೊಬೈಲಿನಲ್ಲಿ ಹುಡುಕುತ್ತಲೇ ಇದ್ದ.

'ಅಪ್ಪಾ ಆಫೀಸಿಂದ ಬಂದ ತಕ್ಷಣ ಚಾ ಕೊಟ್ಟು, ಅವಾ ಸುಧಾರಿಸಿಕೊಂಡ ಮ್ಯಾಲೆ ಮುಂದ ಮಾತಾಡಬೇಕು ಅನ್ನೋದು ಈಗಿನ ಮಕ್ಕಳಿಗೆ ಗೊತ್ತಾಗೋದಿಲ್ಲ' ಎಂದು ಕಲ್ಲನ್ನು ಸಾಲಿನಲ್ಲಿ ಕಟ್ಟಿ ಸೊಸೆಯತ್ತ ಬೀಸಿದ ಶಶಿಯಮ್ಮ.

'ಏನೋಪಾ! ವಯಸ್ಸಾಗಿಂದ ಬಾಳ ದಿನಾ ಇರಬಾರದು. ಈ ಬಿಪಿ, ಶುಗರು ಸುಮ್ನ ಜಿವಾ ಹಿಂಡತಾವ. ನಿಮ್ಮಪ್ಪಾ ಲಗೂನ ಹೋಗಿ ಪುಣ್ಯಾ ಮಾಡಿದ' ಎಂದು ತಮ್ಮ ರಾಗ ಪ್ರಾರಂಭಿಸಿದರು. ಬರುತ್ತಿದ್ದ ಕೋಪವನ್ನು ಹತ್ತಿಕ್ಕಿ, ನಾಲಿಗೆಗೆ ಸುಮ್ಮನಿರುವಂತೆ ತಾಕೀತು ಮಾಡುತ್ತ ಟೇಬಲ್ ಮೇಲೆ ಚಹಾ ಇಟ್ಟು ಒಳನಡೆದಳು ಮಧು. ಅಷ್ಟರಲ್ಲೇ ಕ್ರಿಕೆಟ್ ಬ್ಯಾಟ್ ಬೀಸುತ್ತ ಒಳ ಬಂದ ತರುಣನ ಅವತಾರ ನೋಡಿ ಸಂದೀಪನ ತಲೆ ಗಿರ ಗಿರ ತಿರುಗಿದಂತಾಯಿತು. ಶಾಲೆಯ

